ಸಿ.ಸಿ. 906/2019

ಪಿ.ಡಬ್ಲ್ಯೂ.1 ಸಿ.ಡಬ್ಲ್ಯೂ.-1

ದಿನಾಕಃ 15-06-2022 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎನ್. ವಕೀಲರವರಿಂದಃ**

ನಮ್ಮ, 1 ಮತ್ತು 4 ನೇ ಆರೋಪಿತರ ಮನೆ ಅಕ್ಕಪಕ್ಕದಲ್ಲಿರುತ್ತದೆಂದರೆ ಸರಿ. 2 ಮತ್ತು 3 ನೇ ಆರೋಪಿತರು ಪ್ರತ್ಯೇಕವಾಗಿ ಬೇರೆ ಮನೆಯಲ್ಲಿ ವಾಸವಿರುತ್ತಾರೆಂದರೆ ಸಾಕ್ಷಿಯು ಅವರು ಪಕ್ಕದ ಮನೆಯಲ್ಲಿಯೇ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ಆರೋಪಿತರು ವಾಸವಿರುವ ಮನೆ ಸರ್ಕಾರದಿಂದ ಮಂಜೂರಾದ ಮನೆ ಎಂದರೆ ಸರಿ. ಸದರಿ ಮನೆಯನ್ನು ಎರಡುವರೆ ಜಾಗ ಬಿಟ್ಟು ಕಟ್ಟಿಕೊಂಡಿರುತ್ತೇವೆ. 1 ಮತ್ತು 4 ನೇ ಆರೋಪಿತರರ ಮನೆ ಮುಂದೆ ಜಾಗ ಇರುತ್ತದೆ. 1 ನೇ ಆರೋಪಿಯು ಕಿಳುತ್ತಿದ್ದ ಮರ ನಮ್ಮ ಮನೆಯ ಬಲಗಡೆಯ ನಮ್ಮ ಜಾಗದಲ್ಲಿತ್ತು. ಘಟನೆ ನಡೆದ ದಿನ ನಮ್ಮ ಮನೆಯಲ್ಲಿ ಯಾರು ಇರಲಿಲ್ಲ. ನನಗೆ ಮಕ್ಕಳು ಹಾಗೂ ಗಂಡ ಇದ್ದಾರೆ. ನಮ್ಮ ಮನೆಯಲ್ಲಿ ಟ್ರ್ಯಾಕ್ಟರ್ ಇರುತ್ತದೆ. ಘಟನೆ ನಡೆದ ನಿಮ್ಮ ಮನೆಯಲ್ಲಿ ನಿಮ್ಮ ಗಂಡ ಹಾಗೂ ಮಕ್ಕಳು ಮನೆಯಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ಚಾಸಾ-2 ನನ್ನ ಮಗ. ಚಾಸಾ-3 ನನ್ನ ಭಾವನ ಹೆಂಡತಿ. ಚಾಸಾ-4 ನನ್ನ ಭಾವನ ಮಗ. ಘಟನೆ ನಡೆದ ದಿನ ನಾನು ಆಸ್ಪತ್ರೆಗೆ 9-00 ಗಂಟೆಗೆ ತೆರಳಿರುತ್ತೇನೆ. ಆಸ್ಪತ್ರೆಗೆ ಆ್ಯಂಬೂಲೆನ್ಸ್ ನಲ್ಲಿ ಚಾಸಾ-2 ನನ್ನನ್ನು ಕರೆದುಕೊಂಡು ಹೋಗಿರುತ್ತಾನೆ. ಆಸ್ಪತ್ರೆಯಲ್ಲಿ ನಾನು ಒಂದು ವಾರ ದಾಖಲಾಗಿರುತ್ತೇನೆ. ನಾನು ಆಸ್ಪತ್ರೆಗೆ ದಾಖಲಾಗಿ ಮರುದಿನ ಪೊಲೀಸರು ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ದಿನಾಂಕ ನನಗೆ ನೆನಪಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನಿಪಿ-1 ಕ್ಕೆ ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1 ನ್ನು ನಾನೇ ಹೇಳಿ ಪೊಲೀಸರಿಂದ ಬರೆಸಿರುತ್ತೇನೆ. ನಮ್ಮ ಮನೆಯ ಕಾಂಪೌಂಡ್ ಮನೆಯಾಗಿರುವುದರಿಂದ ಯಾವುದೇ ಗಿಡಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದೊಣ್ಣೆ ಸುಮಾರು ಎರಡುವರೆ ಅಡಿ ಉದ್ದ ಇತ್ತು. ಸದರಿ ದೊಣ್ಣೆಯನ್ನು ನಾನೇ ಪೊಲೀಸರಿಗೆ ನ್ಯಾಯಾಲಯಕ್ಕೆ ತಂದು ನೀಡಿರುತ್ತೇನೆ. ಯಾವುದೇ

ಗಲಾಟೆ ನಡೆಯದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.